ವಿವರಗಳನ್ನೂ ಸಹ ಅವರು ಕೇಳಿದ್ದಾರೆ. ಸರ್ಕಾರ ಇದರ ಬಗ್ಗೆ ಗಂಭೀರವಾಗಿ ತೆಗೆದುಕೊಂಡು, ಈ ಒಂದು ಪರಿಹಾರ ಕಾರ್ಯದಲ್ಲಿ ಈಗಾಗಲೇ ತೊಡಗಿದೆ. ಎಲ್ಲೆಲ್ಲಿ ತಕ್ಷಣವೇ ಕೆಲಸ ಕಾರ್ಯಗಳನ್ನು ಮಾಡಬೇಕೋ, ಅದನ್ನೂ ನಾವು ಮಾಡುತ್ತಿದ್ದೇವೆ. ಇದರ ಬಗ್ಗೆ ಇನ್ನೂ ಹೆಚ್ಚಿನ ವಿವರಗಳನ್ನು ತರಿಸಬೇಕಾಗಿದೆ. ಕೆಲವೊಂದು ಜಿಲ್ಲೆಗಳಿಂದ ಮಾಹಿತಿಗಳು ಬರುತ್ತಿವೆ. ಪ್ರತಿಯೊಬ್ಬ ಜಿಲ್ಲಾಧಿಕಾರಿಗಳಿಂದ ಮಾಹಿತಿಗಳನ್ನು ನಾವು ತರಿಸುತ್ತಿದ್ದೇವೆ. ಉಸ್ತುವಾರಿ ಸಚಿವರು ಕೆಲವೊಂದು ಜಿಲ್ಲೆಗಳಿಗೆ ಭೇಟಿ ಕೊಟ್ಟಿದ್ದಾರೆ. ಆದ್ದರಿಂದಾಗಿ ಪೂರ್ತಿಯಾಗಿ ಎಲ್ಲಾ ವಿವರಗಳನ್ನು ಪಡೆದುಕೊಂಡು ಇದರ ಬಗ್ಗೆ ನಾಳೆ ನಾನು ಒಂದು ಹೇಳಿಕೆಯನ್ನು ಸದನದಲ್ಲಿ ಮಂಡಿಸುತ್ತೇನೆ. ನಾಳೆಯವರೆಗೂ ನನಗೆ ಅವಕಾಶವನ್ನು ಕೊಡಬೇಕೆಂದು ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ಕೊಡಗಿನಲ್ಲಿ ಜನ ಸತ್ತಿದ್ದಾರೆ, ಸಾಯುತ್ತಿದ್ದಾರೆ. ಇವರು ನಾಳೆ ವರದಿ ತರಿಸಿಕೊಂಡು ಉತ್ತರ ಕೊಡುತ್ತೇವೆ ಎಂದರೆ ಹೇಗೆ? ಏನಿದು?....

(ಅಡಚಣೆ)

ಶ್ರೀ ವಾಟಾಳ್ ನಾಗರಾಜ್: .... ಇದು ಸರಿಯಿಲ್ಲ. ನಿಮ್ಮ ಉತ್ತರ ನಮಗೆ ತೃಪ್ತಿ ತಂದಿಲ್ಲ. ಇದನ್ನು ವಿರೋಧಿಸಿ ನಾನು ಧರಣಿ ಮಾಡುತ್ತೇನೆ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ಶ್ರೀ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಲ್ಲಿ ಧರಣಿ ನಿರತರಾದವರು)

ಅಧ್ಯಕ್ಷರು: ನಿಮಗೆ ವಾಕ್ ಔಟ್‌ಗೆ ಒಂದು ಅವಕಾಶ ಸಿಕ್ಕಿತು.

ಅಧ್ಯಕ್ಷರು: ಆಯಿತು, ಇಷ್ಟೊಂದು ಕೋಪಗೊಂಡರೆ ಹೇಗೆ?

(ಅಡಚಣೆ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

(ಅಡಚಣೆ)

ಶ್ರೀ ಎನ್. ಧರ್ಮಸಿಂಗ್ (ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೆ, ಮಾನ್ಯ ವಾಟಾಳ್ ನಾಗರಾಜ್‌ರವರು ಇವತ್ತು ವೆಲ್‌ಗೆ ಏಕೆ ಬಂದಿದ್ದಾರೆ ಎಂದರೆ, ಮಾನ್ಯ ಕಂದಾಯ ಮಂತ್ರಿಗಳು ಸ್ವಲ್ಪ ತಡವಾಗಿ ಸದನಕ್ಕೆ ಬಂದರು, ನಾವು ಬೆಳಿಗ್ಗೆ ಪ್ರಸ್ತಾಪ ಮಾಡಿದಾಗ ತಾವು ಅದರ ಬಗ್ಗೆ ಅರ್ಧ

ಗಂಟೆ ಕಾಲ ಚರ್ಚೆ ನಡೆಸಲಿಕ್ಕೆ ಅವಕಾಶ ಕೊಟ್ಟಿರಿ. ಇದು ವರದಿ ತರಿಸಿ ಉತ್ತರ ಕೊಡತಕ್ಕಂಥದ್ದಲ್ಲ. ನಿಮ್ಮ Control Room ಇದೆ. Are you getting any information? ಜಿಲ್ಲಾಧಿಕಾರಿಗಳು ಏನು ಮಾಡುತ್ತಿದ್ದಾರೆ? ಇವತ್ತಿನ ಹವಾಮಾನ ಸೂಚನೆ ಪ್ರಕಾರ ಮುಂದಿನ 48 ಗಂಟೆಗಳಲ್ಲಿ ಇನ್ನೂ ಭಾರೀ ಮಳೆ ಬರತಕ್ಕಂಥ ಸಂಭವ ಇದೆ. ನಾನು ಈಗಾಗಲೇ PWD Minister ಗೆ ಹೇಳಿದಂತೆ, ಇವತ್ತು ಬೆಳಗಾವಿಯಿಂದ ಮೀರಜ್‌ಗೆ ಹೋಗತಕ್ಕಂಥ ರಸ್ತೆ ಸರಿ ಇಲ್ಲ, ಅಲ್ಲಿ ಸೇತುವೆಗಳು ಬಿದ್ದು ಹೋಗಿವೆ. ಇಂತಹ ವೇಳೆಯಲ್ಲಿ ಸರ್ಕಾರದ ಪರವಾಗಿ immediate ಆಗಿ ತಾವು ಅಲ್ಲಿಗೆ ಹೋಗಬೇಕಾಗಿತ್ತು, ಆದರೆ ಹೋಗಿಲ್ಲ. ಮಾನ್ಯ ಮಂತ್ರಿಗಳೂ ಆದೇಶ ಕೂಡ ಕೊಡಬೇಕಾಗಿತ್ತು. ನಾನು ವರದಿ ತರಿಸಿ ಉತ್ತರ ಕೊಡುತ್ತೇನೆ ಎನ್ನತಕ್ಕಂಥ ಹೇಳಿಕೆ ಏನಿದೆ, ಅದು ಸರಿಯಲ್ಲ. ಮಾನ್ಯ ಯಡಿಯೂರಪ್ಪನವರು ಇಲ್ಲಿ ಕುಳಿತಿದ್ದಾಗ, ಮಾನ್ಯ ಕಂದಾಯ ಸಚಿವರೂ ಕೂಡ ಈ ಕಡೆಗೆ ಕುಳಿತಿದ್ದಾಗ, ಎಷ್ಟೋ ಸಾರಿ ತಾವೇ ಈ ವಿಚಾರದ ಬಗ್ಗೆ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿದ್ದಿರಿ. ಈಗಾಗಲೇ ಬಹಳಷ್ಟು ಸದಸ್ಯರು ಹೇಳಿದ್ದಾರೆ. ನಾನು ಮುಖ್ಯಮಂತ್ರಿಗಳಾಗಿದ್ದಾಗ, ನಾನು ಮತ್ತು ಅಂದು ಉಪ ಮುಖ್ಯಮಂತ್ರಿಗಳಾಗಿದ್ದು ಕಂದಾಯ ಸಚಿವರಾಗಿದ್ದವರು ಹಾಗೂ ನೀರಾವರಿ ಮಂತ್ರಿಗಳಾಗಿದ್ದವರು. ಮೂರು ಸಲ ನಾವು ಅಲ್ಲಿಗೆ ಹೋಗಿ ಬಂದಿದ್ದೆವು. ಎಲ್ಲಾ ಕಡೆಗೂ ಹೋಗಿದ್ದೆವು. Because, that will create a confidence. ಇವತ್ತು ವಿಶ್ವಾಸ ಮೂಡಿಸತಕ್ಕಂಥ ರೀತಿಯಲ್ಲಿ ಕೆಲಸ ಮಾಡಿದರೆ, ಸರ್ಕಾರ ನಮ್ಮ ಮನೆ ಬಾಗಿಲಿಗೆ ಬರುತ್ತದೆ, ಸರ್ಕಾರ ಕೂಡ ಕರ್ನಾಟಕ ರಾಜ್ಯದಲ್ಲಿದೆ ಎನ್ನತಕ್ಕಂಥ ಅನಿಸಿಕೆ ಮೂಡತಕ್ಕಂಥ ರೀತಿಯಲ್ಲಿ ಪರಿಣಾಮಕಾರಿಯಾದ ಕ್ರಮಗಳನ್ನು ತಾವು ತೆಗೆದುಕೊಳ್ಳಬೇಕು. ನಾನು ಉತ್ತರ ತರಿಸುತ್ತೇನೆ, ಮಾಡುತ್ತೇನೆ ಅನ್ನತಕ್ಕಂಥ ರೀತಿಯಲ್ಲಿ ಹೇಳುವುದು ಸರಿಯಾದುದಲ್ಲ. ತಾವು ಇದನ್ನು ಗಮನದಲ್ಲಿಟ್ಟುಕೊಂಡು, ಕ್ರಮ ತೆಗೆದುಕೊಳ್ಳಬೇಕು. ಯಾವ ರೀತಿಯಾಗಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದ್ದೀರಿ ಎಂಬುದನ್ನು ತಾವು ಹೇಳಲೇಬೇಕು.

ಶ್ರೀ ಜಗದೀಶ್ ಶೆಟ್ಟರ್: ಸನ್ಮಾನ್ಯ ಅಧ್ಯಕ್ಷರೇ...

ಶ್ರೀ ಜೆ.ಎ. ಶ್ರೀರಾಮರೆಡ್ಡಿ: ನಾವೆಲ್ಲಾ ವಿಷಯಗಳನ್ನು ಪ್ರಸ್ತಾಪಿಸಿ ಬಿಡುತ್ತೇವೆ. ಮಾನ್ಯ ಜಗದೀಶ್ ಶೆಟ್ಟರ್‌ರವರೆ, ತಾವು ಎಲ್ಲದಕ್ಕೂ ಒಟ್ಟಿಗೇ ಉತ್ತರ ಕೊಡಿ.

(ಅಡಚಣೆ)

ಶ್ರೀ ಜಗದೀಶ್ ಶೆಟ್ಟರ್: ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಚಂದ್ರಗೌಡರು ಕೊಡಗಿಗೆ ಹೋಗಿದ್ದಾರೆ. ಮಾನ್ಯ ಬಾಲಚಂದ್ರ ಜಾರಕಿಹೊಳಿಯವರು ಬೆಳಗಾಂ ಜಿಲ್ಲೆಯಲ್ಲೇ ಉಸ್ತುವಾರಿ ನಡೆಸುತ್ತಿದ್ದಾರೆ. ಎಲ್ಲಾ ಕಡೆಗೂ ಸಚಿವರುಗಳು ಅಲ್ಲಿ ಪ್ರವಾಸ ಮಾಡುತ್ತಿದ್ದಾರೆ. ಇವತ್ತು ಬೆಳಗಾವಿ ಜಿಲ್ಲೆಯಲ್ಲಿ ಅಲ್ಲಿಯ ಜಿಲ್ಲಾಧಿಕಾರಿಗಳು ಎಲ್ಲೆಲ್ಲಿ ತೊಂದರೆಯಾಗಿದೆ ಎನ್ನುವಂತಹ...

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಎಲ್ಲದಕ್ಕೂ ಒಂದೇ ಸಾರಿ ಉತ್ತರ ಹೇಳಿ.

(ಅಡಚಣೆ)

ಶ್ರೀ ಕೆ.ಶ್ರೀನಿವಾಸಗೌಡ: ... ಜಿಲ್ಲಾ ಉಸ್ತುವಾರಿ ಮಂತ್ರಿಗಳು ಹೋಗಿ ಎಲ್ಲವನ್ನೂ ನೋಡಬೇಕೇ? ಜಿಲ್ಲಾಧಿಕಾರಿಗಳಿಗೆ ಹೇಳಿದರೆ 10 ನಿಮಿಷದಲ್ಲಿ ವರದಿ ಕಳುಹಿಸುತ್ತಾರೆ...

(ಅಡಚಣೆ)

ಅಧ್ಯಕ್ಷರು: ಈಗ ಯಾರ ಮಾತೂ ಕೇಳುತ್ತಿಲ್ಲ. ಮಾನ್ಯ ಶ್ರೀನಿವಾಸಗೌಡರ ಧ್ವನಿ ಬಹಳ ಜೋರಾಗಿರುವುದರಿಂದ ನನಗೆ ಅವರ ಮಾತು ಮಾತ್ರ ಕೇಳುತ್ತಿದೆ.

(ಅಡಚಣೆ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ: ... ನಾವು ಕ್ಲಾರಿಫಿಕೇಷನ್ ಕೇಳುವುದು ಬೇಡವೇ? ಒಂದೇ ಸಲ ಉತ್ತರ ಕೊಟ್ಟರೆ ಹೇಗೆ? ಮಾನ್ಯ ಸಚಿವರು ದಯವಿಟ್ಟು ಒಂದು ನಿಮಿಷ ಕುಳಿತುಕೊಳ್ಳಿ. ತಾವು ಆಮೇಲೆ ಉತ್ತರ ಹೇಳಿ.

(ಅಡಚಣೆ)

ಅಧ್ಯಕ್ಷರು: ಮಾನ್ಯ ವಾಟಾಳ್ ನಾಗರಾಜ್‌ರವರು ತಾವು ಸದನದ ಬಾವಿಯಲ್ಲಿ ನಿಂತು ಮಾತನಾಡುವಂತಿಲ್ಲ. ನೀವು ಕೈ ಕಟ್ಟಿಕೊಂಡು ಸುಮ್ಮನೆ ನಿಂತಿರಬೇಕು.

(ಅಡಚಣೆ)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಒಂದು ನಿಮಿಷ ನಾವು ಹೇಳಿ ಬಿಡುತ್ತೇವೆ. ತಾವು ದಯವಿಟ್ಟು ಆಮೇಲೆ ಉತ್ತರ ಹೇಳಿ.

(ಅಡಚಣೆ)

ಶ್ರೀ ಕೆ.ಶ್ರೀನಿವಾಸಗೌಡ: .... ಈ ಸರ್ಕಾರ ಕುಂಭಕರ್ಣ ನಿದ್ರೆ ಹೋಗುತ್ತಿದೆ...

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಬೇಕು.

(ಅಡಚಣೆ)

ಶ್ರೀ ಬಿ.ಎಸ್. ಯಡಿಯೂರಪ್ಪ: ಮಾನ್ಯ ವಾಟಾಳ್‌ರವರೆ, ತಾವು ದಯವಿಟ್ಟು ಧರಣಿಯಿಂದ ವಾಪಸ್ ಬನ್ನಿ. ನಾನು ತಮಗೆ ಉತ್ತರ ಕೊಡುತ್ತೇನೆ.

(ಅಡಚಣೆ)

ಅಧ್ಯಕ್ಷರು: ತಾವು ತಮ್ಮ ಸ್ಥಾನವನ್ನು ಅಲಂಕರಿಸಿ.

(ಈ ಹಂತದಲ್ಲಿ ಮಾನ್ಯ ಸದಸ್ಯರಾದ ವಾಟಾಳ್ ನಾಗರಾಜ್‌ರವರು ಸದನದ ಬಾವಿಯಿಂದ ತಮ್ಮ ಸ್ವಸ್ಥಾನಕ್ಕೆ ಹಿಂದಿರುಗಿದರು)

(ಅಡಚಣೆ)

ಅಧ್ಯಕ್ಷರು: ಮಾನ್ಯ ಸಿಂಧ್ಯಾರವರು ಚರ್ಚೆಯಲ್ಲಿ ಭಾಗವಹಿಸಿ ಏನೋ ಮಾತುಗಳನ್ನು ಹೇಳುತ್ತಾರೆ, ಕೇಳೋಣ ಇರಿ.

ಶ್ರೀ ಸಿ.ಎಸ್. ನಾಡಗೌಡ(ಅಪ್ಪಾಜಿ): ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಟ್ಟಿದ್ದಾರೆ. ಇಲ್ಲಿಯವರೆಗೂ ಪರಿಹಾರಕ್ಕೋಸ್ಕರ immediately Contingency Fund ನಿಂದ ಎಷ್ಟು ಹಣ release ಮಾಡಿದ್ದೀರಿ? ಆಹಾರ ವಿತರಣೆ ಎಲ್ಲೆಲ್ಲಿ ಮಾಡಿದ್ದೀರಿ? ಮುಂಜಾಗ್ರತಾ ಕ್ರಮಗಳನ್ನು ಏನೇನು ತೆಗೆದುಕೊಂಡಿದ್ದೀರಿ? ಅದರ ಬಗ್ಗೆ ಹೇಳಬೇಕು..

ಶ್ರೀ ವಾಟಾಳ್ ನಾಗರಾಜ್: ಸಾರ್, ಮಾನ್ಯ ಹಣಕಾಸಿನ ಸಚಿವರು ಉತ್ತರ ಕೊಡಲು ಎದ್ದು ನಿಂತಿದ್ದಾರೆ. ಅವರು ಹೇಳುವುದಕ್ಕೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು: ನಾನು ಮಾನ್ಯ ಸಿಂಧ್ಯಾರವರನ್ನು ಕರೆದಿದ್ದೇನೆ. ಅವರು ಏನೋ ಹೇಳುವವರಿದ್ದಾರೆ. ಅವರು ಮಾತನಾಡಿದ ಮೇಲೆ ಉತ್ತರ ಕೊಡುತ್ತಾರೆ. ತಾವು ಇಷ್ಟೊಂದು ಅವಸರ ಮಾಡಿದರೆ ಹೇಗೆ?

ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ನನ್ನ ಅನುಭವದಿಂದ ಸರ್ಕಾರದ ಗಮನಕ್ಕೆ ಎರಡು ವಿಚಾರಗಳನ್ನು ತರಲಿಕ್ಕೆ ಬಯಸುತ್ತೇನೆ. ಮಾನ್ಯ ಉಪ ಮುಖ್ಯಮಂತ್ರಿಗಳು ಮತ್ತು ಮಾನ್ಯ ಕಂದಾಯ ಸಚಿವರು ದಯಮಾಡಿ ಸ್ವಲ್ಪ ನಾನು ಮಾತನಾಡುವುದನ್ನು ಕೇಳಿ,